# ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 29/2021

ಎಂ. ಡಬ್ಲ್ಯೂ- 1

**ದಿನಾಂಕ 05.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂ ದುವರೆದ ಪಾಟೀ ಸವಾಲುಃ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

1 ನೇ ಪಕ್ಷಗಾರ ಕಾರ್ಮಿಕರು ದಿನಾಂಕ 06.06.2018 ರಿಂದ 09.08.2018 ರವರೆಗೆ ನಮ್ಮ ಕಾರ್ಖಾನೆ ಮುಂದೆ ತಿರುಪತಿಗೆ ಹೋಗದೆ ಧರಣಿ ಕುಳಿತಿದ್ದರು ಎಂದರೆ ಹೌದು. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ 12 ರಲ್ಲಿ ಜೂನ್-06, 2018 ರಿಂದ 09.08.2019 ಎಂದು ಬರೆಸಿದ್ದು ಅದು ಸುಳ್ಳು ಎಂದರೆ ಸಾಕ್ಷಿ ಅದು ಬೆರಳಚ್ಚು ತಪ್ಪು ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಅಂದರೆ 2019 ನೇ ಇಸವಿವರೆಗೆ 1 ನೇ ಪಕ್ಷಗಾರ ಕಾರ್ಮಿಕರು ನಮ್ಮ ಕಾರ್ಖಾನೆ ಮುಂದೆ ಧರಣಿ ಮಾಡಿರಲಿಲ್ಲ ಎಂದರೆ ಸಾಕ್ಷಿ ದಿನಾಂಕ 09.08.2018 ರವರೆಗೂ ಅವರು ಧರಣಿ ಮಾಡಿದ್ದರು ಎಂದು ಉತ್ತರಿಸಿರುತ್ತಾರೆ. 1 ನೇ ಪಕ್ಷಗಾರ ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ ಎಂದು ಹೇಳಿ ಕೈಗಾರಿಕಾ ಕಾಯ್ದೆಯ ಸಂಧಾನಾಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿರಲಿಲ್ಲ ಎಂದರೆ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಒಂದು ವೇಳೆ ಆ ರೀತಿ ಕಾರ್ಮಿಕರು ಮುಷ್ಕರ ಮಾಡಿ ಸಂಧಾನಾಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿದ್ದರೆ ಆ ಸಂಬಂಧ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. 1 ನೇ ಪಕ್ಷಗಾರ ಕಾರ್ಮಿಕರಿಗೆ ವರ್ಗಾವಣೆ ಮಾಡಿದ್ದ ಸ್ಥಳಕ್ಕೆ ವರದಿ ಮಾಡಿಕೊಂಡಿಲ್ಲ, ಆದ್ದರಿಂದ ಅವರು ದುರ್ನಡತೆಯಲ್ಲಿ ತೊಡಗಿದ್ದರು ಎನ್ನುವ ಬಗ್ಗೆ ಕಾರಣ ಕೇಳಿ ನೋಟೀಸ್ ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ.

ಅಸಲು ದಾವೆ ಸಂಖ್ಯೆ 244/2018 ರಲ್ಲಿ ತೊಂದರೆ ಕೊಡಬಾರದು ಎಂದು ಅದೇಶ ಆಗಿತ್ತು. ಆದರೆ ಎಷ್ಟು ದೂರದಿಂದ ಮುಷ್ಕರ ಮಾಡಬಾರದು ಎಂದು ಆದೇಶವಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಕಾರ್ಮಿಕರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ, ಆದ್ದರಿಂದ

ಅವರ ಮೇಲೆ ಕ್ರಮ ಜರುಗಿಸಿ ಎಂದು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಸದರಿ ಉಲ್ಲಂಘನೆಯಾಗಿದ್ದ ಬಗ್ಗೆ ಸಲ್ಲಿಸಿದ್ದ ಅರ್ಜಿಯನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ತಿರುಪತಿಗೆ ವರ್ಗಾವಣೆ ಮಾಡಿದ್ದ 1 ನೇ ಪಕ್ಷಗಾರ ಕಾರ್ಮಿಕರು ನಮ್ಮ ಆದೇಶದ ಪ್ರಕಾರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಮೂರು ರಿಮೈಂಡರಗಳನ್ನು ಕಳುಹಿಸಿದ ನಂತರ ದಿನಾಂಕ 10.08.2018 ರಂದು ಅವರು ಕರ್ತವ್ಯಕ್ಕೆ ಹಾಜರಾಗಿದ್ದರು ಎಂದು ಉತ್ತರಿಸಿರುತ್ತಾರೆ.

ದಿನಾಂಕ 08.08.2018 ರಂದು ಬೆಂಗಳೂರಿನಲ್ಲಿ ಒಂದು ಸಂಧಾನ ಸಭೆ ನಡೆದಿದ್ದು ಅದಕ್ಕೆ ನಾನು ಸಹ ಹಾಜರಾಗಿದ್ದೆ ಎಂದರೆ ಸಾಕ್ಷಿ ನನಗೆ ದಿನಾಂಕಗಳು ನೆನಪಿಲ್ಲ ಎಂದು ಹೇಳಿರುತ್ತಾರೆ. ದಿನಾಂಕ 08.08.2018 ರಂದು ಡಿ.ಎಲ್.ಸಿ.ರವರ ಮುಂದೆ 1 ನೇ ಪಕ್ಷಗಾರ ಕಾರ್ಮಿಕರು ದಿನಾಂಕ 10.08.2018 ರಂದು ವಿಕೃತ ಮಾಲಾ ಸ್ಥಳಕ್ಕೆ ನಿಯೋಜನೆಗೊಂಡಿದ್ದರ ಬಗ್ಗೆ ವರದಿ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದ್ದರು ಎಂದರೆ ಸಾಕ್ಷಿ ಆ ರೀತಿ ನಡೆದಿಲ್ಲ, ದಾಖಲೆಗಳನ್ನು ನಾನು ನೋಡಬೇಕಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ವಿಕೃತ ಮಾಲಾ ಸ್ಥಳದಲ್ಲಿ ನಿಯೋಜನೆಗೊಂಡಿದ್ದ 1 ನೇ ಪಕ್ಷಗಾರ ಕಾರ್ಮಿಕರಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸಿರಿಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ವರದಿ ಮಾಡಿಕೊಳ್ಳುವದಕ್ಕಿಂತ ಮುಂಚೆ 1 ನೇ ಪಕ್ಷಗಾರ ಕಾರ್ಮಿಕರಿಗೆ ನಮ್ಮ ಸಂಸ್ಥೆಯಿಂದ ಎಲ್ಲ ಮೂಲಭೂತ ಸೌಕರ್ಯಗಳನ್ನು ಸದರಿಗಿ ವಿಕೃತಮಾಲಾ ಸ್ಥಳದಲ್ಲಿ ಒದಗಿಸಿರುತ್ತೇವೆ ಎಂದು ಅವರಿಗೆ ತಿಳಿಸಿದ್ದೆವು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ಸದರಿ ವಿಕೃತಮಾಲಾ ಸ್ಥಳದಲ್ಲಿ 60-70 ಕ್ಕಿಂತ ಹೆಚ್ಚು ಸಂಖ್ಯೆಯ ಜನ ಕುಳಿತುಕೊಳ್ಳುವುದಕ್ಕೆ ಸ್ಥಳವೇ ಇರಲಿಲ್ಲ ಎಂದು ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ. ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕವೂ ಕೂಡ ಇರಲಿಲ್ಲ ಎಂದು ಸಾಕ್ಷಿ ವಿದ್ಯುತ್ ಸಂಪರ್ಕ ಇತ್ತು ಹಾಗೂ ಪರ್ಯಾಯ ವ್ಯವಸ್ಥೆಗೆ ಜನರೇಟರನ್ನು ಸಹ ಇಟ್ಟಿದ್ದೆವು ಎಂದು ಹೇಳುತ್ತಾರೆ. 1 ನೇ ಪಕ್ಷಗಾರ ಕಾರ್ಮಿಕರು ವರದಿ ಮಾಡಿಕೊಂಡ ಸಂದರ್ಭದಲ್ಲಿ ಯಾವುದೇ ಜನರೇಟರ ವ್ಯವಸ್ಥೆಯನ್ನು ಮಾಡಿರಲಿಲ್ಲ, ಅವರು ವರದಿ ಮಾಡಿಕೊಂಡ ನಂತರ ಜನರೇಟರನ್ನು ಅಳವಡಿಸಿರುತ್ತೇವೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ.

ಸದರಿ ಕಾರ್ಮಿಕರುಗಳಲ್ಲಿ 18 ಜನ ಮಹಿಳಾ ಕಾರ್ಮಿಕರುಗಳು ಸಹ ಇದ್ದರು ಎಂದರು ಸಾಕ್ಷಿ ಅದಕ್ಕೆ ಕಡತವನ್ನು ನೋಡಿ ಉತ್ತರಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಅವರು ವರದಿ ಮಾಡಿಕೊಂಡ ದಿನದಿಂದ ಅವರಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಕೊಡದೇ, ಅವರಿಗೆ ಕೆಲಸವನ್ನು ಸಹ ಕೊಡದೇ ಹಾಗೆ ಅವರಿಗೆ ಕಿರುಕುಳ ನೀಡುತ್ತಿದ್ದೆವು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿ, ಅವರಿಗೆ ಮೂಲಭೂತ ಸೌಕರ್ಯಗಳನ್ನು ಕೊಟ್ಟಿದ್ದೆವು ಹಾಗೂ ಕೆಲಸದ ಬಗ್ಗೆ ತರಬೇತಿಯನ್ನು ಸಹ ಕೊಟ್ಟಿದ್ದೆವು ಎಂದು ಉತ್ತರಿಸಿರುತ್ತಾರೆ. ಅಲ್ಲಿ ಉತ್ಪಾದನೆ ಮಾಡಿದ್ದ ವಸ್ತುಗಳನ್ನು ಬೇರೆ ಕಡೆ ರವಾನಿಸಲು ಯಾವುದೇ ಆದೇಶಗಳು ನಮ್ಮ ಸಂಸ್ಥೆಗೆ ಇರಲಿಲ್ಲ ಎಂದರೆ ಸುಳ್ಳು. ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲದೇ ಇದ್ದ ಕಾರಣ ಕಾರ್ಮಿಕರು ಮನನೊಂದು ತಿರುಪತಿಯಲ್ಲಿದ್ದ ಜಿಲ್ಲಾಧಿಕಾರಿಗಳ ಮುಂದೆ ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಸರಿ ಎಂದು ನುಡಿದು, ಸದರಿ ಮನವಿಯಲ್ಲಿ ಕಾರ್ಮಿಕರು ಉಚಿತ ಆಹಾರ, ಉಚಿತ ವಸತಿ ಹಾಗೂ ವೇತನ ಹೆಚ್ಚಾಗಿ ನೀಡಬೇಕು ಹಾಗೂ ಉಚಿತ ಸಾರಿಗೆ ವ್ಯವಸ್ಥೆ ಕೊಡಬೇಕು ಎಂದು ಹೇಳಿ ಸದರಿ ಮನವಿಯಲ್ಲಿ ತಿಳಿಸಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಬೇಡಿಕೆ ಪಟ್ಟಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಕಡತಗಳಲ್ಲಿ ಲಭ್ಯವಿದ್ದ ದಾಖಲೆಗಳ ಪಟ್ಟಿಯನ್ನು ನೀಡಿ ಸದರಿ ಮನವಿಯು ಕಡತದಲ್ಲಿ ಲಭ್ಯವಿದೆಯೇ  ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಯು ಸದರಿ ದಾಖಲೆ ಕಡತದಲ್ಲಿ ಲಭ್ಯವಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಅದೇ ರೀತಿ ಜಂಟೀ ಕಾರ್ಮಿಕ ಆಯುಕ್ತರು ಹಾಗೂ ಉಪ ಕಾರ್ಮಿಕ ಆಯುಕ್ತರಿಗೆ 1 ನೇ ಪಕ್ಷಗಾರ ಕಾರ್ಮಿಕರು ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅವರು ಚಾರ್ಟರ ಆಫ ಡಿಮಾಂಡ್ಸನ್ನು ನೀಡಿದ್ದರು ಎಂದು ಉತ್ತರಿಸಿರುತ್ತಾರೆ. ಅವರಿಗೆ ಮೂಲಭೂತ ಸೌಕರ್ಯಗಳು ಇಲ್ಲದೇ ಇದ್ದುದ್ದರ ಬಗ್ಗೆ ದಿನಾಂಕ 18.08.2018 ರಂದು ಒಂದು ಜಂಟೀ ಸಭೆ ನಡೆದಿದ್ದು ನಾನು ಸಹ ಸದರಿ ಸಭೆಯಲ್ಲಿ ಸೇರಿದ್ದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಅದಕ್ಕೆ ನಾವು ತಕರಾರನ್ನು ಸಹ ಮಂಡಿಸಿದ್ದೆವು ಎಂದು ಉತ್ತರಿಸಿರುತ್ತಾರೆ. ಸದರಿ ಶೆಡ್ ನ ಅಕ್ಕಪಕ್ಕದಲ್ಲಿ ಯಾವುದೇ ಕ್ಯಾಂಟಿನ ಆಗಲಿ ಅಥವಾ ಊಟದ ವ್ಯವಸ್ಥೆಯಾಗಲಿ ಯಾವುದು ಇರಲಿಲ್ಲ, ಸದರಿ ವಿಚಾರವನ್ನು ಕಾರ್ಮಿಕರು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ಸದರಿ

ಸ್ಥಳದಲ್ಲಿ ಕ್ಯಾಂಟಿನ ವ್ಯವಸ್ಥೆ ಲಭ್ಯವಿದ್ದರೂ ಕಾರ್ಮಿಕರು ನಮಗೆ ಉಚಿತ ಊಟದ ವ್ಯವಸ್ಥೆ ಹಾಗೂ ಉಚಿತ ತಿಂಡಿಯ ವ್ಯವಸ್ಥೆ ನಮಗೆ ಮಾಡಿಕೊಡಬೇಕು ಎಂದು ಹೇಳಿದ್ದರು. ಸಾಕ್ಷಿ ಮುಂದುವರೆದು ನಾವು ರಿಯಾಯಿತಿ ಆಹಾರವನ್ನು ಅವರಿಗೆ ಪೂರೈಕೆ ಮಾಡಿದ್ದೆವು ಎಂದು ಉತ್ತರಿಸಿರುತ್ತಾರೆ. ಸದರಿ ಶೆಡನಲ್ಲಿ ಕ್ಯಾಂಟಿನ ವ್ಯವಸ್ಥೆ ಇತ್ತಾ ಎಂದರೆ ಸಾಕ್ಷಿ ಸದರಿ ಪ್ಲಾಂಟನಲ್ಲಿ ಡೈನಿಂಗ ಹಾಲ್ ಮತ್ತು ಊಟದ ಸಮಯದಲ್ಲಿ ಹೊರಗುತ್ತಿಗೆಯಿಂದ ಕಾರ್ಮಿಕರಿಗೆ ಆಹಾರದ ಪೂರೈಕೆ ಮಾಡಬೇಕು ಎಂದು ಸಿದ್ಧತೆಗಳನ್ನು ಮಾಡಿದ್ದೆವು ಎಂದು ಹೇಳುತ್ತಾರೆ. ಸದರಿ ಶೆಡನಲ್ಲಿ ಯಾವುದೇ ಆಹಾರದ ಉತ್ಪಾದನೆ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ನಾವು ಹೊರಗುತ್ತಿಗೆ ಆಧಾರದಲ್ಲಿ ಕಾರ್ಮಿಕರಿಗೆ ಆಹಾರ ಪೂರೈಕೆ ಮಾಡಿದ್ದೆವು ಎಂದು ಉತ್ತರಿಸಿರುತ್ತಾರೆ. ಸದರಿ ಹೊರಗುತ್ತಿಗೆಯವರೊಂದಿಗೆ ಮಾಡಿಕೊಂಡಿದ್ದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ.

ಈ ಸಮಯದಲ್ಲಿ ಶ್ರೀ. ಎಲ್.ಎಂ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**